ಸಹಕಾರಿ ಔದ್ಯೋಗಿಕ ಸಂಸ್ಥೆಗಳು

೧೫೮. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕೈಗಾರಿಕಾ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸಹಕಾರಿ ಔದ್ಯೋಗಿಕ ಸಂಸ್ಥೆಗಳ ಸಂಖ್ಯೆ ಎಷ್ಟು ?

ಆ) ೫೦ ಲಕ್ಷ ರೂಪಾಯಿ ಮೇಲ್ಪಟ್ಟಿರುವ ಸಹಕಾರಿ ಸಂಸ್ಥೆಗಳಲ್ಲಿ ಆಗಿರುವ ಹಾನಿಯ ಮೊತ್ತ ಎಷ್ಟು ?

ಇ) ನೂಲಿನ ಗಿರಣಿ ಹಾಗೂ ಸಕ್ಕರೆ ಕಾರ್ಖಾನೆಗಳನ್ನು ಲೆಕ್ಕಪತ್ರಗಳನ್ನು ವಿಧಾನ ಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ಒಳಪಡಿಸಲು ಹಿಂಜರಿಯುತ್ತಿರುವುದಕ್ಕೆ ಕಾರಣವೇನು ?

ಶ್ರೀ ಆರ್.ಬಿ. ಪೋತದಾರ್ (ಕೈಗಾರಿಕಾ ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೧೮೮೨ ಔದ್ಯೋಗಿಕ ಸಹಕಾರ ಸಂಸ್ಥೆಗಳು, ೧೬ ಸಹಕಾರ ಸಕ್ಕರೆ ಕಾರ್ಖಾನೆಗಳು ಮತ್ತು ೭ ಸಹಕಾರ ನೂಲಿನ ಗಿರಣಿಗಳು ಇರುತ್ತದೆ.

ಆ) ನಷ್ಟವಾಗಿರುವ ಮೊತ್ತವನ್ನು ಈ ಕೆಳಕಂಡಂತೆ ನಮೂದಿಸಿದೆ.—

		(ರೂ. ಲಕ್ಷಗಳಲ್ಲಿ)
೧	ಔದ್ಯೋಗಿಕ ಸಹಕಾರ ಸಂಸ್ಥೆಗಳು	೧೩೩.೪೭
೨	ಸಹಕಾರ ಸಕ್ಕರೆ ಕಾರ್ಖಾನೆಗಳು	೬,೫೦೪.೭೦
೩	ಸಹಕಾರ ನೂಲಿನ ಗಿರಣಿಗಳು	೨,೩೪೮.೩೯
	ಒಟ್ಟು	೮,೯೮೬.೫೬

ಇ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ೧೯೫೯ರ ಪ್ರಕಾರ ಯಾವುದೇ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆಯ ಪ್ರತಿಗಳನ್ನು ಶಾಸನ ಸಭೆಯಲ್ಲಿ ಇಡಲು ಅವಕಾಶವಿರುವುದಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಹೊಸದಾಗಿ ಮಿನಿಸ್ಟರ್ ಫಾರ್ ಇಂಡಸ್ಟ್ರಿಯಲ್ ಕೋ ಆಪರೇಟಿವ್ಸ್ ಎಂದು ಪೋರ್ಟ್‌ಫೊಲಿಯೋ ನಿರ್ಮಾಣ ಆಗಿದೆ. ಸಂತೋಷ ಆದರೆ, ೧೬ ಕೋ ಆಪರೇಟಿವ್ ಶುಗರ್ ಫ್ಯಾಕ್ಟರೀಸ್‌ನಲ್ಲಿ ಯಾವ್ಯಾವುದು ಎಷ್ಟೆಷ್ಟು ಲಾಸ್ ಆಗಿದೆ. ಎಂದು ವಿವರಗಳನ್ನು ಕೊಟ್ಟರೆ ಒಳ್ಳೆಯದು. ಮತ್ತು ೭ ಸ್ಪಿನ್ನಿಂಗ್ ಮಿಲ್‌ಗಳಲ್ಲಿ ಈಗಾಗಲೇ ಸಾಕಷ್ಟು ಹಾನಿಯಾಗಿದೆಯೆಂದು ಹೇಳಿದ್ದಾರೆ. ಸಂಪೂರ್ಣ ೨೩ ಕೋಟಿ ರೂಪಾಯಿಗಳ ಹಾನಿಯಾಗಿದೆ. ಶುಗರ್ ಫ್ಯಾಕ್ಟರಿಗಳಲ್ಲಿ ೬೫ ಕೋಟಿಯಷ್ಟು ಹಾನಿಯಾಗಿದೆ. ಒಟ್ಟು ಸುಮಾರು ನೂರು ಕೋಟಿ ರೂಪಾಯಿಯಷ್ಟು ಹಣ ಇಂಡಸ್ಟ್ರಿಯಲ್ ಕೋ ಆಪರೇಟೀವ್ ಸೆಕ್ಟಾರ್‌ನಲ್ಲಿ ಲಾಸ್ ಆಗಿದೆ. ಇದಕ್ಕೆ ಕಾರಣ ಏನೆಂದು ತನಿಖೆ ಮಾಡಿ ಯಾರ್ಯಾರು ತಪ್ಪಿತಸ್ಥರು ಇದ್ದಾರೆ. ಯಾರಿಂದ ತೊಂದರೆಯಾಗಿದೆ ಎಂದು ತಿಳಿಯುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಎರಡನೆಯ ಪ್ರಶ್ನೆ ಏನೆಂದರೆ, ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಒಪ್ಪಿಸಲಿಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ ? ಇದು ಲೆಜಿಸ್ಲೇಚರ್ ಕಮಿಟಿಗೆ ಬಂದರೆ ಅವರ ಮೇಲೆ ಒಂದು ಹಿಡಿತ ಬರುತ್ತದೆಯೆಂಬ ಭಾವನೆ ನನ್ನಲ್ಲಿದೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಇದರ ಅಕೌಂಟ್ಸ್‌ನ್ನು ಒಪ್ಪಿಸಲಿಕ್ಕೆ ಕಾನೂನು ನಿಯಮಾವಳಿಗಳನ್ನು ಏಕೆ ಬದಲಾವಣೆ ಮಾಡಬಾರದು ?

ಶ್ರೀ ಆರ್.ಬಿ. ಪೋತದಾರ್.—ಮಾನ್ಯ ಸದಸ್ಯರು ಬೇರೆ ಬೇರೆ ಕೋ ಆಪರೇಟಿವ್ ಸೆಕ್ಟಾರ್‌ನ ಸಕ್ಕರೆ ಕಾರ್ಖಾನೆಗಳ ನಷ್ಟದ ಬಗ್ಗೆ ಮಾಹಿತಿಯನ್ನು ಕೇಳಿದ್ದಾರೆ. ಅವುಗಳ ವಿವರ ಹೀಗಿದೆ.—

೧	ಕಂಪಲಿ ಶುಗರ್ ಫ್ಯಾಕ್ಟರಿ, ಕಂಪ್ಲಿ	೪೦೬.೭೧ ಲಕ್ಷ ರೂಪಾಯಿಗಳು
೨	ಪಾಂಡವಪುರ ಶುಗರ್ ಫ್ಯಾಕ್ಟರಿ, ಪಾಂಡವಪುರ	೪೪.೨೮ ,,
೩	ಹಿರಣ್ಯಕೇಶಿ ಶುಗರ್ ಫ್ಯಾಕ್ಟರಿ, ಸಂಕೇಶ್ವರ್ ಇದು ಪ್ರಾಫಿಟ್‌ನಲ್ಲಿದೆ.	೧೫೫.೩೫ ಲಕ್ಷ ರೂಪಾಯಿಗಳು
೪	ಬೀದರ್ ಶುಗರ್ ಫ್ಯಾಕ್ಟರಿ, ಬೀದರ್ ಲಾಸ್‌ನಲ್ಲಿದೆ.	೧೨೮.೨೬ ,,
೫	ದೂಧಗಂಗಾ ಶುಗರ್ ಫ್ಯಾಕ್ಟರಿ, ಚಿಕ್ಕೋಡಿ.	೬೪೧.೩೨ ,,
೬	ಮಲಪ್ರಭಾ ಶುಗರ್ ಫ್ಯಾಕ್ಟರಿ, ಎಂ.ಕೆ. ಹುಬ್ಬಳ್ಳಿ.	೧೩೦.೮೦ ,,
೭	ರಾಯಬಾಗ್ ಶುಗರ್ ಫ್ಯಾಕ್ಟರಿ, ರಾಯಬಾಗ್.	೮೦೪.೨೬ ,,
೮	ಭದ್ರಾ ಶುಗರ್ ಫ್ಯಾಕ್ಟರಿ, ದೊಡ್ಡಬತ್ತಿ.	೬೬೯.೯೯ ,,
೯	ಘಟಪ್ರಭ ಶುಗರ್ ಫ್ಯಾಕ್ಟರಿ, ಗೋಕಾಕ್.	೮೬೨.೫೮ ,,
೧೦	ಶ್ರೀರಾಮಾ ಶುಗರ್ ಫ್ಯಾಕ್ಟರಿ, ಚುಂಚನಕಟ್ಟಾ.	೫೭೨.೦೦ ,,
೧೧	ಹೇಮಾವತಿ ಶುಗರ್ ಫ್ಯಾಕ್ಟರಿ, ಶ್ರೀನಿವಾಸಪುರ.	೧೬೧.೧೬ ,,
೧೨	ದಕ್ಷಿಣ ಕನ್ನಡ ಶುಗರ್ ಫ್ಯಾಕ್ಟರಿ, ಬ್ರಹ್ಮಾವರ.	೩೦೩.೧೪ ,,
೧೩	ಕರ್ನಾಟಕ ಕೋ ಆಪರೇಟಿವ್ ಶುಗರ್ ಫ್ಯಾಕ್ಟರಿ, ಹಾವೇರಿ.	೫೯೨.೧೩ ,,
೧೪	ಗೌರಿಬಿದನೂರು ಮಂತ್ತು ವಾಣಿವಿಲಾಸ್ ಶುಗರ್ ಫ್ಯಾಕ್ಟರಿಗಳು ನಾನ್‌ವರ್ಕಿಂಗ್ ಕೋಪರೇಟಿವ್ ಶುಗರ್ ಫ್ಯಾಕ್ಟರಿಗಳು. ಇವೆರಡರ ಒಟ್ಟು ನಷ್ಟ ಇದು ೩೦-೯-೧೯೮೫ರ ವರೆಗೆ ಲಾಸ್ ಕ್ಯಾಪಿಟಲೈಸ್ಡ್ ಆಗಿದೆ.	೧೧೮೯.೫೨ ,,

ಇನ್ನು ಸ್ಪಿನ್ನಿಂಗ್ ಮಿಲ್‌ಗಳ ಲಾಸ್ ಬಗ್ಗೆ ಕೇಳಿದ್ದೀರಿ.

೧	ಗದಗ್ ಸ್ಪಿನ್ನಿಂಗ್ ಮಿಲ್ಸ್, ಹುಲಕೋಟಿ	೧೦೯.೨೮ ಲಕ್ಷ ರೂಪಾಯಿಗಳು
೨	ಬಿಜಾಪುರ ಕೋಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್, ಬಿಜಾಪುರ.	೫೨೨.೧೧ ,,
೩	ಬಾಗಲಕೋಟೆ ಕೋಪರೇಟೀವ್ ಸ್ಪಿನ್ನಿಂಗ್ ಮಿಲ್ಸ್, ಬಾಗಲಕೋಟೆ.	೩೨೬.೨೨ ,,
೪	ರಾಯಚೂರು ಕೋ ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್, ಲಿ; ರಾಯಚೂರು.	೪೨೦.೬೭ ,,

೫	ಫಾರ್ಮರ್ಸ್ ಕೋ ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್ ಲಿ., ಹುಲುಕೋಟಿ.	೧೯೪.೦೦	,,
೬	ಬೆಳಗಾಂ ಕೋ ಆಪರೇಟಿವ್ ಸ್ಪಿನ್ನಿಂಗ್ ಲಿ., ಪಂತಲಕುಂದ್ರಿ.	೩೭೦.೨೪	,,
೭	ಬನಹಟ್ಟಿ ಕೋ ಆಪರೇಟಿವ್ ಸ್ಪಿನ್ನಿಂಗ್ ಮಿಲ್ ಲಿ., ಬನಹಟ್ಟಿ.	೪೦೫.೮೭	,,

ಹೀಗೆ ಒಟ್ಟು ೨೩೪೪.೩೯ ಆಗಿದೆ. ಇದರ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದೆ. ಈ ಕಮಿಟಿ ಈಗಾಗಲೇ ಒಂದುಸಾರಿ ಸಭೆ ಸೇರಿದೆ. ಇನ್ನೊಂದು ಸಭೆಯನ್ನು ಬೇಗನೆ ಮಾಡುತ್ತಿದ್ದೇವೆ. ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಅಕೌಂಟ್ಸ್ ಕಳುಹಿಸಿಲ್ಲ ಬಗ್ಗೆ ಕೋ ಆಪರೇಟಿವ್ ಆಕ್ಟ್‌ನಲ್ಲಿ ಪ್ರಾವಿಷನ್ ಇಲ್ಲ. ಆಡಿಟರ್ ಜನರಲ್ ಏನು ರಿಮಾರ್ಕ್ಸ್ ಕಳುಹಿಸಿಂತಾರೆ, ತಾವು ಆ ರೀತಿಯಲ್ಲಿ ಅಮೆಂಡ್‌ಮೆಂಟ್ ತಂದರೆ ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ತಾವು ಸದಕಾರ ಮಂತ್ರಿಗಳು ಇದಮೇಲೆ ಒಂದ್ ಸ್ಟೇಟ್‌ಮೆಂಟ್ ಮಾಡಿದಿರಿ. ಮಹಾರಾಷ್ಟ್ರದಲ್ಲಿರತಕ್ಕ ಕೋ ಆಪರೇಟಿವ್ ಸೆಕ್ಟಾರ್‌ಗಳನ್ನು ನೋಡಿ. ನಾವೂ ಅದೇರೀತಿ ಮಾಡುತ್ತೇವೆಂದು ಹೇಳಿದಿರಿ, ಬಹಳ ಸಂತೋಷ. ಇವತ್ತು ೧೦೦ ಕೋಟಿ ರೂಪಾಯಿಗಳು ಈ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೆಕ್ಟಾರ್‌ಗಳಲ್ಲಿ ಲಾಸ್ ಆಗಿದೆ. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ ಜನರಿಗೆ ನಂಬಿಕೆ ಹೋಗುತ್ತದೆ. ತಾವು ಜೊತೆಗಾಗಿ ಬೆಳಗಾಂನಲ್ಲಿ ಸಕ್ಕರೆ ಕಾರ್ಖಾನೆ ಮಾಡುತ್ತೇವೆಂದು ಹೇಳಿದ್ದೀರಿ, ನಾವು ಇದನ್ನು ಒಂದು ದೃಷ್ಟಿಯಲ್ಲಿ ಸ್ವಾಗತ ಮಾಡಿದರೂ, ಕೆಲವೊಂದು ದೃಷ್ಟಿಯಲ್ಲಿ ವಿರೋಧ ಮಾಡಬೇಕಾಗುತ್ತದೆ. ಈಗಾಗಲೇ ಇರತಕ್ಕ ಷುಗರ್ ಫ್ಯಾಕ್ಟರಿಗಳನ್ನು ಸುಧಾರಣೆ ಮಾಡಲು ಕಾರ್ಯಕ್ರಮ ಕೈಗೆದುಕೊಳ್ಳಬೇಕು. ಎಲ್ಲೆಲ್ಲಿ ನಷ್ಟವಾಗಿದೆ, ಯಾರಿಂದ ನಷ್ಟವಾಗಿದೆ. ಅಂತಹವರ ಮೇಲೆ ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಮತ್ತೊಂದು ಸಲಹೆ ಕೋ ಆಪರೇಟಿವ್ ಸೆಕ್ಟಾರ್ ರೂಲ್ಸ್ ಪ್ರಕಾರ ಏನಾದರೂ ಕ್ರಮ ತೆಗೆದು ಕೊಳ್ಳುವಂತಿದ್ದರೆ ಅಥವಾ ಕ್ರಿಮಿನಲ್ ಪ್ರೊಸಿಜರ್ ಪ್ರಕಾರ ಅವರುಗಳ ಆಸ್ತಿಯನ್ನು ಪೊಟಕು ಮಾಡುವಂತಹ ಕಾರ್ಯಕ್ರಮವಾಗಲೀ, ಯಾವುದೇ ಒಂದು ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದು ಕೊಳ್ಳದೇ ಹೋದರೆ ಇಂಡಸ್ಟ್ರಿಯಲ್ ಸೆಕ್ಟಾರ್‌ಗಳು ಸುಧಾರಣೆ ಆಗುವುದಕ್ಕೆ ಸಾಧ್ಯವಿಲ್ಲ. ನವಂಗೂ ಮಹಾರಾಷ್ಟ್ರದ ಜನರಿಗೂ ಪ್ರತ್ಯಾಸ ಇದೆ. ದಯವಾಡಿ ಏನಾದರೂ ಮಾಡಿ, ನೀವು ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ತರತಕ್ಕಂಥ ಕಾರ್ಯಕ್ರಮ ಮಾಡಬೇಕು. ಜೊತೆಗೆ ಅಮೆಂಡ್‌ಮೆಂಟ್ ತರುವುದಕ್ಕೂ ಸರ್ಕಾರ ಮುಂದಾಗಬೇಕು.

ಶ್ರೀ ಆರ್.ಬಿ. ಪೋತ್‌ದಾರ್.—ತಾವು ಹೇಳಿದ್ದು ನನಗೆ ಅರ್ಥವಾಯಿತು. ಈಗಾಗಲೇ ಕ್ಯಾಬಿನೆಟ್ ಸಬ್ ಕಮಿಟಿ ಮಾಡಿದ್ದೇವೆ. ಶೀಘ್ರವಾಗಿ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ನಾನು ಹೇಳಿದ್ದು, ಇದರ ಬಗ್ಗೆ ಕೆಲವರು ತಮಗೆ ಶಿಫಾರಸ್ಸು ಮಾಡಬಹುದು. ಕೆಲವೊಂದು ಸಲ ಇದು ಆಗುತ್ತದೆ.

ಶ್ರೀ ಆರ್.ಬಿ. ಪೋತ್‌ದಾರ್.—ನಾನಂ ಯಾವುದೇ ಶಿಫಾರಸ್ಸಿಗೆ ಬಗ್ಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಹೇಳಿದುದರಲ್ಲಿ ಅರ್ಥ ಇದೆ. ಇಂಡಸ್ಟ್ರಿಯಲ್ ಕೋ ಆಪರೇಟಿವ್ ಸೆಕ್ಟಾರ್‌ನಿಂದ ೧೦೦ ಕೋಟಿ ರೂಪಾಯಿ ಲಾಸ್ ಆಗಿದೆ. ಕೊನೆಯ ಪಕ್ಷ ಇದು ಈ ಸದನಕ್ಕೆ ಗೊತ್ತಾಗಬೇಕು. ಎಷ್ಟೆಷ್ಟು ಲಾಸ್ ಆಗಿದೆ, ಯಾರಿಂದ ಲಾಸ್ ಆಗಿದೆ ಎಂಬುದು ಗೊತ್ತಾದರೆ, ಕ್ರಮ ತೆಗೆದುಕೊಳ್ಳುವುದಕ್ಕೆ ಕ್ಯಾಬಿನೆಟ್‌ಗೆ ಸುಲಭವಾಗುತ್ತದೆ. ಇದನ್ನು ಇಲ್ಲಿಗೇ ಡಿಸ್ಕಸ್ ಮಾಡಿ ಕೈ ಬಿಡುವುದಕ್ಕೆ ಬದಲು ಪಬ್ಲಿಕ್ ಅಕೌಂಟ್ಸ್ ಕಮಿಟಿ ಮುಂದೆ ಕಳುಹಿಸಿ. ಆಗ ಗಾಜ್ಮದ ಜನತೆಗೆ ಇದರ ಬಗ್ಗೆ ಗೊತ್ತಾಗುತ್ತದೆ. ಕೋ-ಆಪರೇಟಿವ್ ಸೆಕ್ಟಾರ್ ಸೊಸೈಟಿಗಳಲ್ಲಿ ೧೦೦ ಕೋಟಿ ರೂಪಾಯಿಗಳಷ್ಟು ಹಣ ಲಾಸ್ ಆದರೆ ನಾವು ಯಾರನ್ನು ನಂಬುವುದು ?

ಶ್ರೀ ಆರ್.ಬಿ. ಪೋತ್‌ದಾರ್. —ಇದರ ಬಗ್ಗೆ ಪರಿಶೀಲನೆ ಹೇಗೆ ಮಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡಲು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಲಾಗಿದೆ. ಕ್ಯಾಬಿನೆಟ್ ಸಬ್ ಕಮಿಟಿಯು ಅದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮಂತ್ರಿಯವರು ಸಹ ಈ ಮೊದಲು ಕೋ-ಆಪರೇಟಿವ್ ಸಂಸ್ಥೆಗಳಲ್ಲಿ ಕೆಲಸ ಮಾಡಿ ಅನುಭವವನ್ನು ಪಡೆದುಕೊಂಡಿದ್ದಾರೆ. ಆಗ ನಮ್ಮ ರಾಜ್ಯದಲ್ಲಿರುವ ಕೋ-ಆಪರೆಟಿವ್ ಸೆಕ್ಟಾರ್‌ಗಳು ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ ಹೋಗಿಬಿಟ್ಟಿವೆ. ಹೀಗೆ ಬಿಟ್ಟರೆ ಮುಂದಕ್ಕೆ ಯಾವ ಸರ್ಕಾರ ಬಂದರೂ ಏನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ, ಕೋ ಆಪರೇಟಿವ್ ಸೆಕ್ಟಾರ್‌ಗಳ ಲೆಕ್ಕಪತ್ರಗಳನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಯು ಮುಂದೆ ತನ್ನ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಮುಂದೆ ತರುವುದಕ್ಕೆ ಏನು ತೊಂದರೆ ಇದೆ ? ಇದರ ಕಾನೂನಿಗೆ ತಿದ್ದುಪಡಿ ತರಲಿಕ್ಕೆ ಏನು ತೊಂದರೆ ಇದೆ ?

ಶ್ರೀ ಆರ್.ಬಿ. ಪೋತ್‌ದಾರ್.—ಕ್ಯಾಬಿನೆಟ್ ಸಬ್ ಕಮಿಟಿಯು ಇದರ ಬಗ್ಗೆ ಒಂದು ಸರಿಯಾದ ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಕೋ-ಆಪರೇಟಿವ್ ಸೆಕ್ಟಾರ್‌ಗಳು ಅನೇಕ ವರ್ಷಗಳಿಂದ ನಷ್ಟವನ್ನು ಅನುಭವಿಸಿಕೊಂಡು ಬರುತ್ತಿವೆ. ಕೋ-ಆಪರೇಟಿವ್ ಸೆಕ್ಟಾರ್‌ಗಳಲ್ಲಿ ಮೂಲ ದೋಷ ಎಲ್ಲಿದೆ, ಹಾಗೂ ಈ ದೋಷಗಳನ್ನು ಸರಿಪಡಿಸಬೇಕಾದರೆ ಏನು ಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ತೀರ್ಮಾನ ಮಾಡುವುದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಲಾಗಿದೆ. ಸಹಕಾರ ರಂಗಗಳು ವಿಫಲವಾದರೆ ಗ್ರಾಮಾಂತರ ಜನಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದನ್ನೆಲ್ಲಾ ಗಂಭೀರವಾಗಿ ಆಲೋಚನೆ ಮಾಡಬೇಕು. ಕ್ಯಾಬಿನೆಟ್ ಸಬ್ ಕಮಿಟಿ ರಿಪೋರ್ಟ್ ಬಂದ ಮೇಲೆ ಆ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೂ ತರುತ್ತೇವೆ.

ಅಧ್ಯಕ್ಷರು.—ಈಗ ಆರ್-ಎನ್. ನಾಯಕ್‌ರವರ ಪ್ರಶ್ನೆ.

ಉತ್ತರ ಕನ್ನಡ ಜಿಲ್ಲೆಯ ವ್ಯವಸಾಯ ಸೇವಾ ಸಹಕಾರ ಸಂಘಗಳ ಕಾರ್ಯದರ್ಶಿಗಳ ವರ್ಗಾವಣೆ ಕುರಿತು.

ಳರ್ಕ. **ಶ್ರೀ ಆರ್. ಎನ್. ನಾಯ್ಕ.** (ಭಟ್ಕಳ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಸೇವಾ ಸಹಕಾರಿ ಸಂಘಗಳೆಷ್ಟು, ಹಾಗೂ ಅವುಗಳಲ್ಲಿರುವ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರಾಥಮಿಕ ಸೇವಾ ಸಹಕಾರಿ ಸಂಘಗಳೆಷ್ಟು ಹಾಗೂ ಕಾರ್ಯದರ್ಶಿಗಳ ಸಂಖ್ಯೆ ಎಷ್ಟು ?

ಇ) ಪ್ರಾಥಮಿಕ ಸೇವಾ ಸಹಕಾರಿ ಸಂಘಗಳ ಕಾರ್ಯದರ್ಶಿಗಳನ್ನು ವರ್ಗಾಯಿಸುವ ಅಧಿಕಾರ ಯಾರಿಗಿದೆ ;

ಈ) ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೫ರಿಂದ ಈ ತನಕ ಎಷ್ಟು ಕಾರ್ಯದರ್ಶಿಗಳನ್ನು ವರ್ಗಾಯಿಸಲಾಗಿದೆ ?

ಶ್ರೀ ಎಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ದಿನಾಂಕ ೩೦-೬-೮೬ಕ್ಕೆ ಅಂತ್ಯಗೊಂಡಂತೆ ರಾಜ್ಯದಲ್ಲಿ ಒಟ್ಟು ೪೭೭೭ ಕೃಷಿ ಸೇವಾ ಸಹಕಾರ ಸಂಘಗಳು ಇವೆ.

ಅವುಗಳಲ್ಲಿರುವ ಕಾರ್ಯದರ್ಶಿಗಳ ಸಂಖ್ಯೆ ೪೭೭೭,

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೬೩ ಪ್ರಾಥಮಿಕ ಕೃಷಿ ಸೇವಾ ಸಹಕಾರ ಸಂಘಗಳು ಇವೆ, ಒಟ್ಟು ೧೬೩ ಕಾರ್ಯದರ್ಶಿಗಳಿರುತ್ತಾರೆ.